ಶ್ರೀ. ಶ್ರೀನಿಕ್ ಕುಮಾರ್ ಇವರು ಸರ್ವೆ.ನಂ. 33/2, 33/3 ಮತ್ತು 33/4, ಬಂಡ್ರಗಲ್-ಗ್ರಾಮ, ಕುಷ್ಟಗಿ ತಾಲೂಕು, ಕೊಪ್ಪಳ ಜಿಲ್ಲೆಯಲ್ಲಿ 7.25 ಹೆಕ್ಟೆರ್ (17.37 ಎಕರೆ) ಪ್ರದೇಶದಲ್ಲಿ ವರ್ಷಕ್ಕೆ 9,000 ಕ್ಯೂಬಿಕ್ ಮೀಟರ್ ಸಾಮರ್ಥ್ಯದ ಪಿಂಕ್ ಗ್ರಾನೈಟ್ ಗಣಿಗಾರಿಕೆಯ ಪ್ರಸ್ತಾವನೆಯನ್ನು ಮಾಡುವ ಉದ್ದೇಶಕ್ಕಾಗಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಲು ಆದೇಶಿಸಿರುತ್ತಾರೆ. ಇದರ ಪ್ರಯುಕ್ತ ಉದ್ದೇಶಿತ ಯೋಜನೆಯ ಸ್ಥಾಪನೆಯ ಹಿನ್ನೆಲೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

ದಿನಾಂಕ : 19.08.2022

ವೇಳೆ : ಮಧ್ಯಾನ್ಹ: 11:00 ಘಂಟೆ,

ಸ್ಥಳ : ಉದ್ದೇಶಿತ ಯೋಜನೆಯ ಪ್ರದೇಶ,

**ಉದ್ದೇಶಿತ ಯೋಜನೆಯ ಪ್ರದೇಶ**
**ಶ್ರೀ. ಶ್ರೀನಿಕ್ ಕುಮಾರ್**
**ಸರ್ವೆ.ನಂ. 33/2, 33/3 ಮತ್ತು 33/4, ಬಂಡ್ರಗಲ್-ಗ್ರಾಮ ಪಂಚಾಯತಿ,**
**ಬಂಡ್ರಗಲ್-ಗ್ರಾಮ, ಕುಷ್ಟಗಿ - ತಾಲೂಕು,**
**ಕೊಪ್ಪಳ- ಜಿಲ್ಲೆ**

ಶ್ರೀ. ಶ್ರೀನಿಕ್ ಕುಮಾರ್ ಇವರು ಸರ್ವೆ.ನಂ. 33/2, 33/3 ಮತ್ತು 33/4, ಬಂಡ್ರಗಲ್-ಗ್ರಾಮ, ಕುಷ್ಟಗಿ ತಾಲೂಕು, ಕೊಪ್ಪಳ ಜಿಲ್ಲೆಯಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 19.08.2022 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ, ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | ಶ್ರೀ. ಶ್ರೀನಿಕ್ ಕುಮಾರ್ ಇವರು ಸರ್ವೆ.ನಂ. 33/2, 33/3 ಮತ್ತು 33/4, ಬಂಡ್ರಗಲ್-ಗ್ರಾಮ, ಕುಷ್ಟಗಿ ತಾಲೂಕು, ಕೊಪ್ಪಳ ಜಿಲ್ಲೆ (ಉದ್ದೇಶಿತ ಯೋಜನೆಯ ಪ್ರದೇಶ) |
| ಹಾಜರಿದ್ದ ಅಧಿಕಾರಿಗಳ ವಿವರ | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | ಅನುಬಂಧ-4 |
| ಪರಿಸರ ಸಾರ್ವಜನಿಕ ಆಲಿಕೆ ಸಭೆ ಪ್ರಕ್ರಿಯೆಯ ಛಾಯಾ ಚಿತ್ರಗಳು | ಅನುಬಂಧ-6 |
| ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ.ಗಳು. | ಅನುಬಂಧ-7 |

ಕೇಂದ್ರ ಅರಣ್ಯ, ಪರಿಸರ ಹಾಗೂ ಆಘಾತ ಅಧ್ಯಯನ ಅಧಿಸೂಚನೆ, ಇವರು ದಿನಾಂಕ 14-09-2006 (ತಿದ್ದುಪಡಿ ದಿನಾಂಕ: 01-12-2009) ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಯು ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ. ಈ ನಿಟ್ಟನಲ್ಲಿ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಹಾಗೂ ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ.

ಗಣಿ ಮತ್ತು ಭೂ-ವಿಜ್ಞಾನ ಇಲಾಖೆ ಪತ್ರದ ಸಂಖ್ಯೆ: ಸಂ.ಕಂದಾಯ/ಗಣಿ/02/ಕ.ಸಂ-17943/2015-16/5779 Dated:13.08.2015 ರಂದು " ಪಿಂಕ್ ಗ್ರಾನೈಟ್ ಗಣಿಗಾರಿಕೆ " ಯೋಜನೆಯನ್ನು ಅನುಮೋಧಿಸಿ, ಒಟ್ಟು (17.37 ಎಕರೆ) 7.25 ಹೆಕ್ಟೇರ್ ಪ್ರದೇಶದಲ್ಲಿ ವರ್ಷಕ್ಕೆ 9,000 ಕ್ಯೂಬಿಕ್ ಮೀಟರ್‌ಗಳಷ್ಟು ಪಿಂಕ್ ಗ್ರಾನೈಟ್ ಗಣಿಗಾರಿಕೆಯನ್ನು ಉತ್ಪಾದನೆಯ ಯೋಜನೆಯನ್ನು ಹೊಂದಿದೆ. (ಕ್ವಾರಿ ಯೋಜನೆಯ ಅವಧಿ 15 ವರ್ಷ). ಕ್ವಾರಿ ಯೋಜನೆಯನ್ನು ಅನುಮೋದಿಸಿ ವರ್ಷಕ್ಕೆ 9,000 ಕ್ಯೂಬಿಕ್ ಮೀಟರ್ ಸಾಮರ್ಥ್ಯದ ಪಿಂಕ್ ಗ್ರಾನೈಟ್ ಗಣಿಗಾರಿಕೆಯನ್ನು ಉತ್ಪಾದನೆಯ ಯೋಜನೆಯನ್ನು ಹೊಂದಿದೆ.

ಕೇಂದ್ರ ಅರಣ್ಯ ಮತ್ತು ಪರಿಸರ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರಕಾರ (ಆಘಾತ ಅಧ್ಯಯನ ವಿಭಾಗ) ನವದೆಹಲಿ, ಇವರ ಇ.ಐ.ಎ ಅಧಿಸೂಚನೆ ದಿನಾಂಕ: 14-09-2006 ರ ಪ್ರಕಾರ ಈ ಗಣೆಗಾರಿಕೆ ಯೋಜನೆಯು ಬಿ-1 ವರ್ಗವೆಂದು ಪರಿಗಣಿಸಲಾಗಿದೆ. ಯೋಜನೆ ಚಟುವಟಿಕೆ 1 (ಎ) ಇ.ಐ.ಎ ಅಧಿಸೂಚನೆ ಪರಿಸರ ಮಟ್ಟದ ಪ್ರಭಾವದ ಮೌಲ್ಯಮಾಪನ (ಇ.ಓ.ಎ) ಮತ್ತು ಪರಿಸರ ನಿರ್ವಹಣಾ ಯೋಜನೆ (ಇ.ಎಂ.ಪಿ) ನಿಯಮಗಳ ಉಲ್ಲೇಖದ (ಟಿ.ಓ.ಆರ್) ಆದಾರದ ಮೇಲೆ ಸದರಿ ಯೋಜನೆಯ Standards Terms of Reference ಅನ್ನು ದಿನಾಂಕ: 04.10.2021 ರಂದು ಅಂತಿಮಗೊಳಿಸಿ ಅದರಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಲು ಶ್ರೀ. ಶ್ರೀನಿಕ್ ಕುಮಾರ್ ಇವರು ತಿಳಿಸಿರುತ್ತಾರೆ.

ಯೋಜನಾ ಪ್ರವರ್ತಕರ ಮನವಿಯ ಮೇರೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ಕೊಪ್ಪಳ ಇವರಿಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸೂಕ್ತ ದಿನಾಂಕ ಮತ್ತು ಸಮಯವನ್ನು ನೀಡಲು ದಿನಾಂಕ:19.07.2022 ರಂದು ಪತ್ರದ ಮೂಲಕ ಕೋರಲಾಗಿರುತ್ತದೆ. ಅದರಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವಂತೆ ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ:19.08.2022 ರಂದು ಸೂಚಿಸಿ ಸಭೆಯನ್ನು ನಡೆಸಲು ತಿಳಿಸಿರುತ್ತಾರೆ. ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಪ್ಪಳ ಇವರ ಟಿಪ್ಪಣಿ ಆದೇಶದ ಮೇರೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಕೊಪ್ಪಳ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ವಿಸ್ತರಣಾ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಪತ್ರಿಕೆಗಳಾದ " ವಿಜಯ ಕರ್ನಾಟಕ" (ಕನ್ನಡ) ," ಡೆಕ್ಕನ್ ಹೆರಾಲ್ಡ್" (ಆಂಗ್ಲ ಭಾಷೆ) ಯಲ್ಲಿ ದಿನಾಂಕ:19.07.2022, ಹಾಗೂ ಸ್ಥಳೀಯ

ಪತ್ರಿಕೆಯಲ್ಲಿ "ನಾಗರಿಕ" ಎಂಬ ಪತ್ರಿಕೆಯಲ್ಲಿ ದಿನಾಂಕ:20.07.20[illegible] ರಂದು ಪತ್ರಿಕಾ ಪ್ರಕಟಣೆ[illegible] ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಯೋಜನೆಯ ಕಾರ್ಯಕಾರಿ ವರದಿ ಸಾರಾಂಶದ ಕನ್ನಡ ಮತ್ತು ಇಂಗ್ಲಿಷ್ ಪುಸ್ತಕಗಳನ್ನು ಈ ಕೆಳಗಿನ ಸರ್ಕಾರಿ ಕಛೇರಿಗಳಲ್ಲಿ ಇಡಲಾಗಿತ್ತು

- ಜಿಲ್ಲಾಧಿಕಾರಿಗಳ ಕಛೇರಿ ಕೊಪ್ಪಳ, ಜಿಲ್ಲೆ ಕೊಪ್ಪಳ
- ಮುಖ್ಯ ಕಾರ್ಯನಿರ್ವಾಕ ಕಛೇರಿ, ಜಿಲ್ಲಾ ಪಂಚಾಯತ್, ಕೊಪ್ಪಳ
- ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ
- ತಹಶೀಲ್ದಾರ ಕಾರ್ಯಲಯ, ಕುಷ್ಟಗಿ
- ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೊಪ್ಪಳ
- ಸ್ಟೇಟ್ ಲೇವಲ್ ಎನ್‌ವಿರಾನ್‌ಮೆಂಟ್ ಇಮ್‌ಪ್ಯಾಕ್ಟ್ ಅಸೆಸ್‌ಮೆಂಟ್ ಅಥಾರಿಟಿ (State Level environment impact assessment authority )
- ಸಹಾಯ ವಾಣಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ– ಬೆಂಗಳೂರು
- ಗ್ರಾಮ ಪಂಚಾಯತಿ ಅಭಿವೃದಿ ಅಧಿಕಾರಿಗಳು, ಬಂಡ್ರಗಲ್– ಗ್ರಾಮ ಪಂಚಾಯತಿ

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: ದಿನಾಂಕ: 19.08.2022ರಂದು, ಬೆಳಿಗ್ಗೆ 11.00 ಘಂಟೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಎಸ್ ಸಿ ಸುರೇಶ್, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಕೊಪ್ಪಳ ಇವರು ಶ್ರೀಮತಿ ಸಾವಿತ್ರಿ ಬಿ ಕಡಿ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ ಹಾಗೂ ಶ್ರೀ ದೊಡ್ಡಶಾಣಯ್ಯ, ಹಿರಿಯ ಪರಿಸರ ಅಧಿಕಾರಿಗಳು (ಹೆಚ್ಚುವರಿ ಪ್ರಭಾರ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯ ಕಛೇರಿ, ಬಳ್ಳಾರಿ ಮತ್ತು ಕುಷ್ಟಗಿ ತಹಶೀಹಲ್ದಾರ ರವರಿಗೂ ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಸ್ವಾಗತಿಸಿದರು, ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಎಂಟು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಶ್ರೀ ಸಚಿನ್ ಎನ್‌ವಿರೋ ಸಲ್ಯೂಶನ್ ಇವರು ಸದರಿ ಯೋಜನೆಯ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು ಅನುಬಂಧ–5 ರಲ್ಲಿ ಲಗತ್ತಿಸಲಾಗಿದೆ.

**ಶ್ರೀ ಮಲ್ಲನಗೌಡ ಹುನಕುಂಟಿ, ಹಿರೇವಾಣಗೇರಿ-ಗ್ರಾಮ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.**

- ಗಣಿಗಾರಿಕೆಯು ಪ್ರಾರಂಭವಾಗುವುದರಿಂದ ನಮ್ಮ ಕುಟುಂಬಕ್ಕೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.
- ಗಣಿಗಾರಿಕೆಯು ಪ್ರಾರಂಭವಾಗುವುದರಿಂದ ನಮಗೆ ಉದ್ಯೋಗ ದೊರಕಿದಂತಾಗುತ್ತದೆ ಎಂದು ತಿಳಿಸಿದರು.
- ಗಣಿಗಾರಿಕೆಯು ಪ್ರಾರಂಭವಾಗುವುದಕ್ಕೆ ಯಾವುದೇ ಅಭ್ಯಂತರವಿಲ್ಲ ಎಂದು ತಿಳಿಸಿದರು.

**ಶ್ರೀ ಬಸವರಾಜ ಚಿಟಗಿ, ಹಿರೇಶಿವನಗುತ್ತಿ-ಗ್ರಾಮ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.**

- ಗಣಿಗಾರಿಕೆಯು ಪ್ರಾರಂಭವಾಗುವುದಕ್ಕೆ ಯಾವುದೇ ಅಭ್ಯಂತರವಿಲ್ಲ ಎಂದು ತಿಳಿಸಿದರು.
- ಗಣಿಗಾರಿಕೆಯು ಪ್ರಾರಂಭವಾಗುವುದರಿಂದ ನಮ್ಮ ಕುಟುಂಬಕ್ಕೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.
- ಗಣಿಗಾರಿಕೆಯು ಪ್ರಾರಂಭವಾಗುವುದರಿಂದ ನಮಗೆ ಉದ್ಯೋಗ ದೊರಕಿದಂತಾಗುತ್ತದೆ ಎಂದು ತಿಳಿಸಿದರು.
- ಗಣಿಗಾರಿಕೆಯು ಪ್ರಾರಂಭವಾಗುವುದರಿಂದ ವಿಧ್ಯಾರ್ಥಿಗಳ ಶಿಕ್ಷಣಕ್ಕೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

**ಶ್ರೀ ವಿರಯ್ಯ ಹಿರೇಮಠ, ಚಿಕ್ಕಶಿವನಗುತ್ತಿ-ಗ್ರಾಮ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.**

- ಗಣಿಗಾರಿಕೆಯು ಪ್ರಾರಂಭವಾಗುವುದಕ್ಕೆ ಯಾವುದೇ ಅಭ್ಯಂತರವಿಲ್ಲ ಎಂದು ತಿಳಿಸಿದರು.
- ಗಣಿಗಾರಿಕೆಯು ಪ್ರಾರಂಭವಾಗುವುದರಿಂದ ನಮ್ಮ ಕುಟುಂಬಕ್ಕೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

**ಶ್ರೀ. ಆಂಜನೇಯ್ಯ ಸಮಗ್ರ ಪರಿವರ್ತನಾ ಸಂಸ್ಥೆ ಸಮುದಾಯ, ರಾಣೆಬೆನ್ನೂರು-ಗ್ರಾಮ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.**

- ಗಣಿಗಾರಿಕೆಯು ಪ್ರಾರಂಭವಾಗುವುದಕ್ಕೆ ನಮ್ಮ ಸಂಸ್ಥೆಯಿಂದ ಸಂಪೂರ್ಣ ಬೆಂಬಲವನ್ನು ನೀಡುತ್ತೇನೆ ಎಂದು ತಿಳಿಸಿದರು.

**ಶ್ರೀ ಕೆ ಶ್ರೀನಿವಾಸ ಮೂರ್ತಿ, ಸದ್ಗುರು ರಾಮಕೃಷ್ಣ ಪರಮಹಂಸ ರೂರಲ್ ದೇವಲಪ್‌ಮೆಂಟ್ ಸೊಸೈಟಿ, (ಎನ್ ಜಿ ಓ) ಬಳ್ಳಾರಿ, ಇವರು** ರವರು ದಿನಾಂಕ:19.08.2022 ರಂದು ಪತ್ರ ಸಲ್ಲಿಸಿ, ತಮ್ಮ ಪತ್ರದಲ್ಲಿ,

- ಗಣಿಗಾರಿಕೆ ಪ್ರದೇಶದಲ್ಲಿ ಲಾರಿಗಳ ಮೂಲಕ ಮರಳು ಸಾಗಾಣಿಕೆಯಿಂದ ವಾಯು ಮಾಲಿನ್ಯವಾಗುತ್ತದೆ ಎಂದು ತಿಳಿಸಿರುತ್ತಾರೆ.
- ಧೂಳಿನ ಮಾಲಿನ್ಯವನ್ನು ನಿಯಂತ್ರಿಸಲು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕು.
- ಮಾಲಿನ್ಯವನ್ನು ತಡೆಗಟ್ಟಲು ಗಣಿಗಾರಿಕೆ ಪ್ರದೇಶದಲ್ಲಿ ಗಿಡಮರಗಳನ್ನು ಬೆಳೆಸಬೇಕು.
- ಉದ್ಯೋಗಾವಕಾಶಗಳಲ್ಲಿ ಸ್ಥಳೀಯರಿಗೆ ಹೆಚ್ಚಿನ ಆದ್ಯತೆ ನೀಡುವುದು.
- ಸ್ಥಳೀಯರಿಗೆ ಮತ್ತು ಉದ್ಯೋಗಿಗಳಿಗೆ ವೈದ್ಯಕೀಯ ಮತ್ತು ಆರೋಗ್ಯ ಶಿಬಿರಗಳನ್ನು ನಡೆಸುವಂತೆ ತಿಳಿಸಿರುತ್ತಾರೆ.
- ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಸ್ಥಳೀಯ ಪ್ರದೇಶದಲ್ಲಿ ಸಿಆರ್‌ಎಸ್ ಚಟುವಟಿಕೆಗಳನ್ನು ಕೈಗೊಳ್ಳುವುದು.

ಶ್ರೀ ಎಸ್.ಕೀರ್ತಿ ಎನ್‌ವಿರಾನ್‌ಮೆಂಟ್ ಸೊಸೈಟಿ, ಇವರು ರವರು ದಿನಾಂಕ:19.08.2022 ರಂದು ಪತ್ರ ಸಲ್ಲಿಸಿ, ತಮ್ಮ ಪತ್ರದಲ್ಲಿ, ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಶಿಕ್ಷಣ, ಆರೋಗ್ಯ ಮತ್ತು ರಸ್ತೆಗಳನ್ನು ನಿರ್ಮಿಸುವುದು.
- ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು.
- ಮಾಲಿನ್ಯವನ್ನು ತಡೆಗಟ್ಟಲು ಗಣಿಗಾರಿಕೆ ಪ್ರದೇಶದಲ್ಲಿ ಗಿಡಮರಗಳನ್ನು ಬೆಳೆಸಬೇಕು.
- ಉದ್ಯೋಗಾವಕಾಶಗಳಲ್ಲಿ ಸ್ಥಳೀಯರಿಗೆ ಹೆಚ್ಚಿನ ಆದ್ಯತೆ ನೀಡುವುದು.
- ಸ್ಥಳೀಯರಿಗೆ ಮತ್ತು ಉದ್ಯೋಗಿಗಳಿಗೆ ವೈದ್ಯಕೀಯ ಮತ್ತು ಆರೋಗ್ಯ ಶಿಬಿರಗಳನ್ನು ನಡೆಸುವಂತೆ ತಿಳಿಸಿರುತ್ತಾರೆ.

ಶ್ರೀ ಬಿ ವೆಂಕಟೇಶ್ ಹರಿತಾ ಎಜುಕೇಶನಲ್ ರೂರಲ್ ವೆಲ್ ಫೇರ್ ಸೊಸೈಟಿ, ಇವರು ರವರು ದಿನಾಂಕ:19.08.2022 ರಂದು ಪತ್ರ ಸಲ್ಲಿಸಿ, ತಮ್ಮ ಪತ್ರದಲ್ಲಿ , ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಶಿಕ್ಷಣ, ಆರೋಗ್ಯ ಮತ್ತು ರಸ್ತೆಗಳನ್ನು ನಿರ್ಮಿಸುವುದು.
- ಮಾಲಿನ್ಯವನ್ನು ತಡೆಗಟ್ಟಲು ಗಣಿಗಾರಿಕೆ ಪ್ರದೇಶದಲ್ಲಿ ಗಿಡಮರಗಳನ್ನು ಬೆಳೆಸಬೇಕು.
- ಉದ್ಯೋಗಾವಕಾಶಗಳಲ್ಲಿ ಸ್ಥಳೀಯರಿಗೆ ಹೆಚ್ಚಿನ ಆದ್ಯತೆ ನೀಡುವುದು.
- ಸ್ಥಳೀಯರಿಗೆ ಮತ್ತು ಉದ್ಯೋಗಿಗಳಿಗೆ ವೈದ್ಯಕೀಯ ಮತ್ತು ಆರೋಗ್ಯ ಶಿಬಿರಗಳನ್ನು ನಡೆಸುವಂತೆ ತಿಳಿಸಿರುತ್ತಾರೆ.

ಶ್ರೀ ವಿರಯ್ಯ ಸಣಾಚಾರಿ, ಕಾಟಾಪೂರ–ಗ್ರಾಮ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಗಣಿಗಾರಿಕೆಯು ಪ್ರಾರಂಭವಾಗುವುದರಿಂದ ಉದ್ಯೋಗ ದೊರಕಿದಂತಾಗುತ್ತದೆ ಎಂದು ತಿಳಿಸಿದರು.

ಅಧ್ಯಕ್ಷರು ಪರಿಸರ ಅಧಿಕಾರಿಗಳಿಗೆ ಸಾರ್ವಜನಿಕ ಅಭಿಪ್ರಾಯಗಳನ್ನು ಮೌಖಿಕ ಮತ್ತು ಲಿಖಿತ ಹೇಳಿಕೆಗಳನ್ನು ಕ್ರೂಢಿಕರಿಸಿ ನಡುವಳಿಗಳನ್ನು ತಯಾರಿಸಲು ಸೂಚಿಸುತ್ತಾ, ಈ ಕೆಳಗಿನಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಲಾಯಿತು.

- ಪಿಂಕ್ ಗ್ರಾನೈಟ್ ನಡೆಸುವಂತಹ ಗಣಿಗಾರಿಕೆಯವರು ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಕೆಲವು ಕಾಳಜಿಗಳನ್ನು ವಹಿಸಬೇಕಾಗುತ್ತದೆ ಎಂದು ತಿಳಿಸಿದರು ಹಾಗೂ ಮಾಲಿನ್ಯವನ್ನು ತಡೆಗಟ್ಟಲು ಗಣಿಗಾರಿಕೆ ಪ್ರದೇಶದಲ್ಲಿ ಗಿಡಮರಗಳನ್ನು ಕಡ್ಡಾಯವಾಗಿ ಬೆಳೆಸಬೇಕು.
- ಉದ್ಯೋಗಾವಕಾಶಗಳಲ್ಲಿ ಸ್ಥಳೀಯರಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಅಧ್ಯಕ್ಷರು ಪರಿಸರ ಅಧಿಕಾರಿಗಳಿಗೆ ಸದರಿ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲು ಸೂಚಿಸಿದರು.

(ಸಾವಿತ್ರಿ ಬಿ ಕಡಿ ಕ.ಆ.ಸೇ.)
ಅಪರ ಜಿಲ್ಲಾಧಿಕಾರಿಗಳು ಮತ್ತು
ಪರಿಸರ ಸಾರ್ವಜನಿಕ ಆಲಿಕೆ
ಸಭೆ ಅಧ್ಯಕ್ಷರು, ಕೊಪ್ಪಳ